ಶ್ರೀ ವಾಟಾಳ್ ನಾಗರಾಜ್ :– ಪೆಟ್ರೋಲ್ ಹಾಗೂ ಡೀಸೆಲ್ ಅಭಾವದ ಬಗ್ಗೆ ಚರ್ಚೆಯನ್ನು ತೆಗೆದುಕೊಳ್ಳಬೇಕು. ಇಡೀ ರಾಜ್ಯದಲ್ಲಿ ಗಂಭೀರ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಒಂದು ರೀತಿಯ ತುರ್ತು ಪರಿಸ್ಥಿತಿ ರೀತಿಯಾಗಿದೆ.

ಶ್ರೀ ಬಿ. ಬಸವಲಿಂಗಪ್ಪ :– ಇವತ್ತು ಶುಕ್ರವಾರ, ನಾವು ಏನಾದರೂ ಊಟಕ್ಕೆ ಹೊರಗಡೆ ಹೋದರೆ, ಮತ್ತೆ ಯಾರೂ ಬರುವುದಿಲ್ಲ. ದಯಮಾಡಿ ಮುಗಿಸಿ ಹೊರಗಡೆ ಹೋಗೋಣ.

ಶ್ರೀ ವಾಟಾಳ್ ನಾಗರಾಜ್ :– ತಮ್ಮದು ಊಟ ಆಗಿರುವ ಹಾಗೆ ಕಾಣುತ್ತದೆ. ತಾವು ಬಾಯಿ ಆಡಿಸುವುದನ್ನು ನೋಡಿದರೆ, ಎಲ್ಲಾ ಮುಗಿಸಿಕೊಂಡು ಬಂದಿರುವ ಹಾಗೆ ಕಾಣುತ್ತದೆ. ಕಾಲಕಾಲಕ್ಕೆ ಊಟ, ಕಾಲಕಾಲಕ್ಕೆ ನಿದ್ರೆ, ಕಾಲಕಾಲಕ್ಕೆ ಎಲ್ಲಾ ವ್ಯವಸ್ಥೆಗಳೂ ತಮಗೆ ಆಗುತ್ತವೆ.

ಉಪಾಧ್ಯಕ್ಷರು :– 10–10 ನಿಮಿಷ ಮಾತನಾಡಿದರೆ ಸಾಕು.

(2) ರಾಜ್ಯದಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಅಭಾವದ ಬಗ್ಗೆ ಚರ್ಚೆ

†ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) :– ಮಾನ್ಯ ಉಪಾಧ್ಯಕ್ಷರೇ, ಕಾಡಿಬೇಡಿಯಾದರೂ ಸಹಿತ, ಕೊನೆಗೂ ಈ ರಾಜ್ಯದಲ್ಲಿ ಅಭಾವಕ್ಕೆ ಈಡಾಗಿರತಕ್ಕ ಡೀಸೆಲ್ ಮತ್ತು ಪೆಟ್ರೋಲ್ ವಿಷಯದ ಚರ್ಚೆಗೆ ಅವಕಾಶವನ್ನು ಕೊಟ್ಟಿದ್ದೀರಿ. ಆದ್ದರಿಂದ ಈ ಸದನದ ಮೂಲಕ ಈ ರಾಜ್ಯದ ಜನತೆಯ ಮೂಲಕ ತಮಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸಿ, ಕಳೆದ ಒಂದೂವರೆ ತಿಂಗಳಿಂದ ರಾಜ್ಯದಲ್ಲಿ ಡೀಸೆಲ್ ಮತ್ತು ಪೆಟ್ರೋಲ್ ಅಭಾವ ಜಾಸ್ತಿಯಾಗಿರುವುದಕ್ಕೆ ಕಳೆದ ವಾರ ಸದನದಲ್ಲಿ ಚರ್ಚೆ ಮಾಡಿದ್ದೆವು. ಚರ್ಚೆ ಮಾಡಿದ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳು ಮತ್ತು ನಾಗರೀಕ ಪೂರೈಕೆ ಸಚಿವರು ಸದನದಲ್ಲಿ ಒಂದು ಹೇಳಿಕೆ ಕೊಟ್ಟು ನಾಳೆ ಪ್ರಧಾನ ಮಂತ್ರಿಗಳು ಬರುವವರಿದ್ದಾರೆ, ಅವರ ಜೊತೆಯಲ್ಲಿ ಈ ಬಗ್ಗೆ ಚರ್ಚೆ ಮಾಡಿ ಈ ರಾಜ್ಯಕ್ಕೆ ಏನು ಡೀಸೆಲ್ ಬರಬೇಕು, ಅದನ್ನು ನೇರವಾಗಿ ತರಿಸಿಕೊಳ್ಳತಕ್ಕ ಪ್ರಯತ್ನ ಮಾಡುತ್ತೇವೆನ್ನುವ ವಿಚಾರವನ್ನು ಈ ಸದನದಲ್ಲಿ ಹೇಳಿದ್ದರು. ಇದಾದಮೇಲೆ ಡೀಸೆಲ್ ಪೂರೈಕೆ ಖೋತಾ ರದ್ದು ಎಂದು ಹೇಳಿ, ನವೆಂಬರ್ 24 ರಂದು ಭಾರತದ ಪೆಟ್ರೋಲ್ ಮತ್ತು ರಾಸಾಯನಿಕ ಖಾತೆ ಸಚಿವರಾದ ಸತ್ಯಪ್ರಕಾಶ ಮಾಳವೀಯ ಅವರು ಒಂದು ಹೇಳಿಕೆಯನ್ನು ಕೋಟ್ಟಿದ್ದಾರೆ. ಈ ದೇಶದಲ್ಲಿ ಡೀಸೆಲ್ ಮೇಲೆ 10 ಪರ್ಸೆಂಟ್ ಖೋತಾ ಇದ್ದು, ಈ ಕಡಿತವನ್ನು ರದ್ದು ಮಾಡಿದ್ದೇವೆಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಕೇಂದ್ರ ಸರ್ಕಾರವೂ ಸಹಿತ ಈ ನಿಟ್ಟಿನಲ್ಲಿ ಪ್ರಯತ್ನಪಟ್ಟಿದೆ, ರಾಜ್ಯಸರ್ಕಾರವು ಸಹ ಪ್ರಯತ್ನಪಡುತ್ತೇನೆಂದು ಹೇಳಿದ್ದರೂ ಸಹ ಇದುವರೆಗೆ ಡೀಸೆಲ್ ನಗರದಲ್ಲಿರತಕ್ಕ, ರಾಜ್ಯದಲ್ಲಿರತಕ್ಕ ಪೆಟ್ರೋಲ್ ಬಂಕುಗಳ ಮುಂದೆ ಮೈಲಿಗಟ್ಟಲೆ ಕ್ಯೂ ನಿಂತ ವಾಹನಗಳ ಸಂಖ್ಯೆ ಕಡಿಮೆಯಾಗಿಲ್ಲ; ಡೀಸೆಲ್ ಬರ ಇಂಗಿಲ್ಲ ಎನ್ನುವುದನ್ನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಮನದಟ್ಟು ಮಾಡಿಕೊಡುವುದಕ್ಕೆ ಇಚ್ಛೆಪಡುತ್ತೇನೆ. ಇದರ ಬಗ್ಗೆ ಸರ್ಕಾರ ಇದುವರೆಗೆ ಏನು ಕಾರ್ಯಕ್ರಮ ಹಾಕಿಕೊಂಡಿದೆ. ಕಳೆದಸಾರಿ ಮಾತನಾಡುತ್ತಿರತಕ್ಕ ಸಂದರ್ಭದಲ್ಲಿ, ವಿರೋಧಪಕ್ಷದವರು ಹೇಳಿದರು. ಕೇಂದ್ರ ಸಚಿವರಾದ ಗುರುಪಾದಸ್ವಾಮಿಯವರನ್ನು ನಾವು ಕೇಳಿದ್ದೇವೆ. ಈ ಸರ್ಕಾರದಿಂದ ಯಾವುದೇ ಮನವಿ ಹೋಗಿಲ್ಲ ಎನ್ನತಕ್ಕ ವಿಚಾರ ಪ್ರಸ್ತಾಪವಾಯಿತು. ದಯಮಾಡಿ, ಸರ್ಕಾರ ಡಿಸೆಲ್ ಕೊರತೆ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಂಡಿದೆ ಎಂಬುದನ್ನು ಸಂಕ್ಷಿಪ್ತವಾಗಿ ಈ ಸದನಕ್ಕೆ ತಿಳಿಸಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಕೇಂದ್ರಮಂತ್ರಿಗಳು ಹೇಳಿರತಕ್ಕ 10 ಪರ್ಸೆಂಟ್ ಕಡಿಮೆಯಾಗಿದ್ದರೆ, ಇನ್ನೂ ಖತಕ್ಕೆ ಕೊರತೆ ಆಗಿದೆ ಎನ್ನುವುದನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಡೀಸೆಲ್ ಕೊರತೆ ಒಂದುಕಡೆಯಾದರೆ, ಇಡೀ ರಾಜ್ಯದಲ್ಲಿರತಕ್ಕ ಕೈಗಾರಿಕಾ ಚಟುವಟಿಕೆಗಳು ಸ್ಥಗಿತವಾಗಿರುವುದನ್ನು ನಾವು ನೋಡುತ್ತಿದ್ದೇವೆ. ಗ್ರಾಮಾಭಿವೃದ್ಧಿ ಕೆಲಸಗಳೂ ಕುಂಠಿತವಾಗಿವೆ. ಈಗತಾನೆ ಮಾನ್ಯ ಕಂದಾಯ ಸಚಿವರು ಹೇಳಿದರು. ಬರಪರಿಹಾರದ ಹಣ ಬಿಡುಗಡೆ ಮಾಡಿದರೂ ಸಹಿತ, ಈ ಹಣವನ್ನು ಖರ್ಚು ಮಾಡುವುದಕ್ಕೆ ಏನು ತೊಂದರೆಯಾಗಿದೆ ಎಂದು. ಇವತ್ತು ಬೋರ್‌ವೆಲ್‌ಗಳನ್ನು ಕೊರೆಯುವುದಕ್ಕೆ, ಕುಡಿಯುವ ನೀರು ಕೊಡುವುದಕ್ಕೆ ಈ ಡೀಸೆಲ್ ಅಭಾವದಿಂದ ಅಸ್ತವ್ಯಸ್ತವಾಗಿದೆ. ಈ ಡೀಸೆಲ್ ಕೊರತೆಯಿಂದ ಹೆನಾಯಸ್ಥಿತಿಗೆ ತಲುಪಿರುವುದು ಒದುಕಡೆಯಾದರೆ, ಈ ಸಂದರ್ಭವನ್ನು ಉಪಯೋಗಿಸಿಕೊಂಡು, ಕಾಳಸಂತೆಯಲ್ಲಿ ಮಾರಾಟ ಮಾಡುವವರು ಜಾಸ್ತಿಯಾಗಿರುವುದನ್ನು ನಾವು ನೋಡುತ್ತಿದ್ದೇವೆ. ಕಳೆದ ಸಭೆಯಲ್ಲಿ ನಾವು ಹೇಳಿದೆವು. ರಾಷ್ಟ್ರ ಹಾಗೂ ರಾಜ್ಯದ ಹೆದ್ದಾರಿಯಲ್ಲಿರತಕ್ಕ ಎಲ್ಲಾ ಪೆಟ್ರೋಲ್ ಬಂಕ್‌ಗಳಲ್ಲೂ, ಸೋಪು,

ವಾಹನಗಳನ್ನು ಒರೆಸತಕ್ಕ ಬಟ್ಟೆಗಂಧದ ಕಡ್ಡಿ, ಅಗರಬತ್ತಿ ಮಾರಾಟ ಮಾಡುತ್ತಿರುವುದನ್ನು ನೋಡುತ್ತಿದ್ದೇವೆಂದು ಹೇಳಿದರೂ ಸಹಿತ ಇದುವರೆಗೂ ಈ ವ್ಯವಸ್ಥೆ ತಪ್ಪಿಲ್ಲ. ಇವತ್ತು ಬೆಳಿಗ್ಗೆ ಲಾರಿ ಮಾಲೀಕರು, ಕಾರ್ಯಕಲಾಪಗಳ ಪಟ್ಟಿಯಲ್ಲಿ ಡೀಸೆಲ್ ಕೊರತೆ ಬಗ್ಗೆ ಚರ್ಚೆ ಬಂದಿರುವುದನ್ನು ನೋಡಿ, ಲಾರಿ ಮಾಲೀಕರ ಸಂಘದವರು ನಮ್ಮನ್ನು ಕೇಳಿದರು. ನಾವು ಇದರ ಬಗ್ಗೆ ಚರ್ಚೆ ಮಾಡುತ್ತಿದ್ದೇವೆಂದು ಹೇಳಿದ್ದೇವೆ. ಒಂದು ವಾರದಿಂದ ಇದು ಚರ್ಚೆಯಾಗಿದೆ. ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತಿದೆ. ಮಾಲೀಕರ ಬಗ್ಗೆ ಏನು ಮಾರಾಟ ಮಾಡುತ್ತಿದ್ದಾರೆ, ಸೋಪು, ಬಟ್ಟೆ ಅಗರಬತ್ತಿ ಇವುಗಳ ಬಗ್ಗೆ ಸರ್ಕಾರದ ಕ್ರಮ ಏನು. ಇನ್ನೂ ಹೇಳಬೇಕೆಂದರೆ, ನಾಚಿಕೆಯಾಗುತ್ತದೆ. ತಾವು ತಪ್ಪು ತಿಳಿದುಕೊಳ್ಳುವುದಿಲ್ಲವೆಂದು ಹೇಳಿದರೆ, ನಿರೋಧ್‌ಗಳನ್ನೂ ಮಾರಾಟ ಮಾಡುತ್ತಿದ್ದಾರೆ. ಆ ಒಂದು ಮಟ್ಟಕ್ಕೆ ಆ ಒಂದು ಹೀನಾಯ ಸ್ಥಿತಿಗೆ ಪೆಟ್ರೋಲ್ ಬಂಕ್ ಮಾಲೀಕರು ಹೋಗಿದ್ದಾರೆ. ಒಂದು ಸೋಪ್‌ನ ಬೆಲೆ 5 ರೂಪಾಯಿಗಳು ಇದ್ದರೆ,20 ರೂಪಾಯಿಗಳಿಗೆ ತೆಗೆದುಕೊಂಡರೆ 100 ಲೀಟರ್ ಡೀಸೆಲ್ ಕೊಡುತ್ತೇವೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಈ ಒಂದು ಕೆಟ್ಟ ಚಾಳಿಯಲ್ಲಿರತಕ್ಕಂಥ ಜನರ ಬಗ್ಗೆ ಸರ್ಕಾರದವರು ಉಗ್ರವಾದ ಕ್ರಮ ತೆಗೆದುಕೊಳ್ಳಬೇಕು. ಇದು ಕೇಂದ್ರ ಸರ್ಕಾರದ ಅಸ್ತಿತ್ವದಲ್ಲಿದ್ದರೂ ಕೇಂದ್ರ ಸರ್ಕಾರದ ಅಧೀನದಲ್ಲಿ ಬಂದರೂ ಸಹ ಮಾರಾಟ ಮಾಡತಕ್ಕಂಥಾದ್ದು ಮತ್ತು ಅಳತೆ ಮಾಡತಕ್ಕಂಥಾದ್ದು ಇದೆಲ್ಲವೂ ರಾಜ್ಯಸರ್ಕಾರಕ್ಕೆ ಒಳಪಡುತ್ತದೆ. ಆದ್ದರಿಂದ ಇದರ ಬಗ್ಗೆ ಇಂದಿನಿಂದಲೇ ಒಂದು ಸರ್ಕಾರದ ಆಜ್ಞೆ ಹೊರಡಿಸಿ ಈ ತರಹ ಕಾಳ ಸಂತೆಯಲ್ಲಿ ಪೆಟ್ರೋಲ್ ಮತ್ತು ಡೀಜಲ್ ಮಾರಾಟ ಮಾಡತಕ್ಕ ಜನರ ಮೇಲೆ ಉಗ್ರವಾದ ಕ್ರಮ ತೆಗೆದುಕೊಳ್ಳುವಂತಹ ಕೆಲಸ ಮಾಡಬೇಕು ಇದನ್ನು ನಗರಗಳಲ್ಲಿ ಏನೋ ಮಾಡುತ್ತೀರಿ ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಅಂದರೆ ನನ್ನ ತಾಲ್ಲೂಕಿನಲ್ಲಿ ಒಂದು ಪೆಟ್ರೋಲ್ ಬಂಕ್ ಇದೆ. ಅಲ್ಲಿ 10 ಸಾವಿರ ಲೀಟರ್ ಡೀಜಲ್ ತರಿಸಿದರೆ 2 ಸಾವಿರ ಲೀಟರ್ ಡೀಜಲ್‌ನ್ನು ಮಾರಾಟ ಮಾಡಿ ಅದು ಕ್ಯೂನಲ್ಲಿ ನಿಂತಿದ್ದವರಿಗೆ ಉಳಿಕೆ ತೀರಿ ಹೋಯಿತು ಎಂದು ಹೇಳಿ ಅವರೇ ಬ್ಯಾರಲ್‌ಗಳನ್ನು ಟ್ರಾಕ್ಟರ್‌ಗಳಲ್ಲಿ ಮತ್ತು ಲಾರಿಗಳಲ್ಲಿ ತರಿಸಿ ಇದು ಸರ್ಕಾರಕ್ಕೆ ಕೊಡುತ್ತೇವೆ ಇದನ್ನು ಸರ್ಕಾರದವರು ನಿಗಧಿ ಮಾಡಿದ್ದಾರೆ ಎಂದು ಹೇಳಿ ಎಲ್ಲಾ ಕೊಟ್ಟ ಮೇಲೆ ಬಂದ ಡೀಜಲ್‌ನಲ್ಲಿ ಬರೀ 2 ಸಾವಿರ ಲೀಟರ್ ಮಾತ್ರ ಮಾರಾಟ ಮಾಡಿ ಇಲ್ಲ ಎಂದು ಬೋರ್ಡ್ ಹಾಕಿಬಿಡುತ್ತಾನೆ. ಇವತ್ತು ಇಡೀ ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಪೆಟ್ಟಿಗೆ ಅಂಗಡಿಗಳಲ್ಲಿ ಮತ್ತು ಗುಡಿಸಲುಗಳಲ್ಲಿ ಡೀಜಲ್ ಕಾಳ ಸಂತೆಯಲ್ಲಿ ಮಾರಾಟವಾಗುತ್ತಿದೆ. ಇದರ ಬಗ್ಗೆ ಸರ್ಕಾರ ತೀವ್ರವಾದ ಎಚ್ಚರಿಕೆ ವಹಿಸಿ ತೀವ್ರವಾದ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈ ಡೀಜಲ್ ಕೊರತೆ ಈ ಡೀಜಲ್‌ನ ಅನಾಹುತವನ್ನು ತಪ್ಪಿಸಬೇಕು ರಾಜ್ಯದಲ್ಲಿ ಪಂಪ್‌ಸೆಟ್‌ಗಳಿಗೆ ಅದರಲ್ಲೂ ರೈತರ ಪಂಪ್‌ಸೆಟ್‌ಗಳಿಗೆ ತುಂಬಾ ತೊಂದರೆ ಆಗಿದೆ. ಅವರು ಡೀಜಲ್‌ಗಾಗಿ ವನವಾಸ ಪಡೆತಕ್ಕಂಥಾದ್ದು ಆಗಿದೆ. ಈ ಎಲ್ಲಾ ವಿಷಯಗಳ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ ಸರ್ಕಾರದವರು ಒಂದು ಆದೇಶ ಕೊಟ್ಟು ಮಾನ್ಯ ನಾಗರೀಕ ಸಚಿವರು ಉತ್ಸಾಹಿಗಳು ಇದ್ದಾರೆ ಅವರು ಹೋರಾಟ ಮಾಡತಕ್ಕಂಥ ಶಕ್ತಿ ಹೊಂದಿದ್ದಾರೆ ಈ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾರೆ ಎಂದು ನಂಬಿ ಸರ್ಕಾರ ಈ ಬಗ್ಗೆ ತಕ್ಷಣ ಒಂದು ಹೇಳಿಕೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

† ಶ್ರೀ ಎಂ.ಎಸ್.ಆತ್ಮಾನಂದ :– ಮಾನ್ಯ ಅಧ್ಯಕ್ಷೆಯವರೇ ಈಗ ತಾನೆ ಈ ಡೀಜಲ್ ಕೊರತೆ ಬಗ್ಗೆ ಸವಿಸ್ತಾರವಾಗಿ ಚಿತ್ರವನ್ನು ನಮ್ಮ ಸ್ನೇಹಿತರು ಕೊಟ್ಟಿದ್ದಾರೆ. ಈ ಒಂದು ಡೀಜಲ್ ಅಭಾವ ಜೊತೆಗೆ ಸೀಮೆಎಣ್ಣೆ ಅಭಾವ ಸಹ ನಾವು ಗ್ರಾಮಾಂತರ ಪ್ರದೇಶಗಳಲ್ಲಿ ಪಟ್ಟಣ ಪ್ರದೇಶಗಳಲ್ಲಿ ಕಾಣುತ್ತಿದ್ದೇವೆ. ಇದರಿಂದ ಜನಸಾಮಾನ್ಯರಿಗೆ ಬಹಳ ತೊಂದರೆ ಆಗಿದೆ. ಈ ಒಂದು ಡೀಜಲ್ ಅಭಾವ ಹಳ್ಳಿಯ ರೈತ ಸಮುದಾಯದ ಮೇಲೆ ಸಹ ತೊಂದರೆಯನ್ನುಂಟು ಮಾಡಿದೆ. ಉದಾಹರಣೆಗೆ ಹೇಳುವುದಾದರೆ ನಮ್ಮ ಜಿಲ್ಲೆಯಲ್ಲಿ ಹೆಚ್ಚು ಕಬ್ಬು ಬೆಳೆಯತಕ್ಕಂಥ ಪ್ರದೇಶ. ನಮ್ಮ ಕಬ್ಬು ಕಾರ್ಖಾನೆಗೆ ಸಾಗಿಸುವುದಕ್ಕೆ ಬಹಳ ತೊಂದರೆಯಾಗಿದೆ. ದಿನಗಟ್ಟಲೆ ಲಾರಿಗಳಿಗೆ ರೈತರು ಕಾಯಬೇಕಾದ ಪರಿಸ್ಥಿತಿ ಇದೆ. ಅದೇ ರೀತಿ ರೈತರು ಉಪಯೋಗ ಮಾಡತಕ್ಕಂಥ ಡೀಜಲ್ ಪಂಪ್‌ಸೆಟ್‌ಗಳಿಗೆ ಸಹ ತೊಂದರೆಯಾಗಿ ರೈತರು 3–4 ದಿವಸ ಮಂಡ್ಯದಲ್ಲಿ ಕಾದು ಕುಳಿತು ಡೀಜಲ್ ತರುವಂತಹ ಪರಿಸ್ಥಿತಿ ಇದೆ. ಈಗ ಕೇಂದ್ರ ಸರ್ಕಾರ ತನ್ನ ಕಡಿತವನ್ನು ಸಹ ರದ್ದು ಮಾಡಿದೆ. ಆದರೂ ಸಹ ಈ ಪರಿಸ್ಥಿತಿ ತುಂಬಾ ಹದಗೆಟ್ಟಿದೆ. ಈ ಪರಿಸ್ಥಿತಿಯನ್ನು ಉತ್ತಮಪಡಿಸುವ ಕಾರ್ಯಕ್ರಮವನ್ನು ಸರ್ಕಾರದವರು

ಹಾಕಿಕೊಂಡು ಎಲ್ಲಾ ಜನರಿಗೂ ಅದರಲ್ಲೂ ಸಾರ್ವಜನಿಕ ಜೀವನದ ಮೇಲೆ ಮಹತ್ವದ ಪರಿಣಾಮವನ್ನುಂಟು ಮಾಡತಕ್ಕಂಥ ಆಭಾವವನ್ನು ನೀಗಿಸಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುತ್ತಾ ರಾಜ್ಯದ ಲಾರಿ ಸಂಘದ ಪದಾಧಿಕಾರಿಗಳನ್ನು ಕರೆದು ಮಾತನಾಡಿ ಬಹುತೇಕವಾಗಿ ಸಾಗಾಣಿಕೆಗೆ ಮೀಸಲಾಗಿಟ್ಟಿರತಕ್ಕಂಥ ಲಾರಿ ಮಾಲೀಕರಿಕೆ ಆದ್ಯತೆ ಮೇಲೆ ಮತ್ತು ಬಸ್ಸು ಮಾಲೀಕರಿಗೆ ಅದ್ಯತೆ ಮೇಲೆ ಡೀಜಲ್ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿ ಕೊಡಬೇಕೆಂದು ನಾನು ಹೇಳಿ ಈ ಡೀಜಲ್ ಎಲ್ಲಾ ಬಂಕ್‌ಗಳಿಗೂ ಒಂದೇ ಸಾರಿ ಬರುವಂತೆ ಮಾಡಿದರೆ ಈ ಕ್ಯೂ ತಪ್ಪಿಸಬಹುದು ಎಂದು ನನಗನಿಸುತ್ತದೆ. ಈ ಬಗ್ಗೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ನನಗೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್ :– ಮಾನ್ಯ ಅಧ್ಯಕ್ಷಣೀಯವರೇ ಈಗಾಗಲೇ ಇಬ್ಬರು ಮಾನ್ಯ ಸದಸ್ಯರು ಇದರ ಬಗ್ಗೆ ಮಾತನಾಡಿ ಸರ್ಕಾರದ ಗಮನ ಸೆಳೆದಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಈಗ ಏನು ಈ ಡೀಜಲ್ ಕೊರತೆಯನ್ನು ನಾವು ನೋಡಿತ್ತಿದ್ದೇವೆ ಇದರ ಜೊತೆಗೆ ಹಳ್ಳಿಗಾಡು ಪ್ರದೇಶಗಳಲ್ಲಿ ಕೂಡ ಸೀಮೆಎಣ್ಣೆ ಕೊರತೆಯನ್ನು ಕೂಡ ನಾವು ನೋಡುತ್ತಿದ್ದೇವೆ. ಸೀಮೆ ಎಣ್ಣೆ ಉಪಯೋಗ ಮಾಡತಕ್ಕಂಥವರು ಬಹಳ ಬಡ ಜನರು ಕ್ಯೂನಲ್ಲಿ ನಿಂತು ಸುಮಾರು ಒಂದು ದಿವಸದ ಸಂಪೂರ್ಣ ಆದಾಯವನ್ನು ಒಂದು ಲೀಟರ್ ಸೀಮೆ ಎಣ್ಣೆ ತೆಗೆದುಕೊಳ್ಳಲು ವ್ಯಯ ಮಾಡುತ್ತಿದ್ದಾರೆ. ಸಾಮಾನ್ಯ ಜನರು ಕೂಡ ಸೀಮೆ ಎಣ್ಣೆಯನ್ನು ಡೀಜಲ್‌ನಲ್ಲಿ ಬೆರೆಸಿ ಕಲಬೆರಕೆ ಮಾಡಿ ಹೆಚ್ಚಿನ ಹಣಕಾಸು ಗಳಿಸಿದ್ದಾರೆ. ಕೆಲವು ಡೀಜಲ್ ಮಾಲೀಕರು ಮೇಲೆ ಕಟ್ಟುನಿಟ್ಟಿನ ನಿಯಂತ್ರಣ ಸರ್ಕಾರ ತರಬೇಕಾಗುತ್ತದೆ. ಇಲ್ಲಿ ಡೀಜಲ್ ವಿತರಣೆ ರಾಜ್ಯ ಮಟ್ಟಕ್ಕೆ ಬರುತ್ತದೆ. ಇಂಡಿಯನ್ ಆಯಿಲ್ ಕಾರ್ಪೊರೇಷನ್‌ನಿಂದ ಬಂದ ಡೀಜಲ್‌ನ್ನು ವಿತರಣೆ ಮಾಡತಕ್ಕಂಥ ಮಹತ್ವದ ವ್ಯವಸ್ಥೆ ನಮ್ಮದು. ಎಷ್ಟು ವಿತರಣೆ ಆಯಿತು? ಯಾವ ಪೆಟ್ರೋಲ್ ಬಂಕ್‌ಗಳಿಗೆ ಯಾವ ಡೀಜಲ್ ಪಂಪ್‌ಗೆ ಎಷ್ಟೆಷ್ಟು ಡೀಸಲ್ ಕೊಟ್ಟರು ಎಷ್ಟೆಷ್ಟು ಕೆರೋಸಿನ್ ಕೊಟ್ಟರು ಎಂದು ಇದನ್ನು ನೇರವಾಗಿ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ವಿವರವಾದ ವರದಿಯನ್ನು ಪ್ರತಿಯೊಂದು ಪಂಪಿನವರು ಕೊಡಬೇಕೆನ್ನುವ ನಿಯಮವನ್ನು ಜಾರಿಗೆ ತರಬೇಕು. ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಯಾವ ಯಾವ ಟ್ರಕ್ಕುಗಳಿಗೆ ಯಾವ ಯಾವ ವಾಹನಗಳಿಗೆ ಹಾಗೂ ಸಾರ್ವಜನಿಕರಿಗೆ ಆಯಿಲ್‌ನ್ನು ವಿತರಣೆ ಮಾಡಲಾಯಿತೆಂಬ ಸಂಪೂರ್ಣವಾದ ವಿವರಗಳನ್ನು ಪ್ರತಿಯೊಂದು ಜಿಲ್ಲಾಧಿಕಾಂಗಳಿಗೆ ತಿಳಿಸಬೇಕೆನ್ನುವ ಕಾರ್ಯಕ್ರಮವನ್ನು ತೆಗೆದುಕೊಳ್ಳದಿದ್ದರೆ ಈ ತೊಂದರೆಯನ್ನು ನಿವಾರಿಸಲಿಕ್ಕೆ ಶಾಧ್ಯವಿಲ್ಲ. ನಾನು ಸುಮಾರು 15 ದಿನಗಳಿಂದ ಬೆಂಗಳೂರು ನಗರದಲ್ಲಿ ಒಂದು 30 ಲೀಟರ್ ಡೀಸಲ್ ತೆಗೆದುಕೊಳ್ಳಬೇಕೆಂದು ಬಹಳ ಪ್ರಯತ್ನಪಟ್ಟರೂ ನನಗೆ ಡೀಸಲ್ ಸಿಗಲಿಲ್ಲ. ಇದನ್ನು ನಾನು ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ಒಬ್ಬ ಶಾಸಕನಾಗಿ ಒಂದು 30 ಲೀಟರ್ ಡೀಸಲ್ ತೆಗೆದುಕೊಳ್ಳುವುದಕ್ಕೆ ನನಗೆ ಅವಕಾಶವಿಲ್ಲದಿದ್ದರೆ ಹೇಗೆ?

ಶ್ರೀ ಬಿ.ಎಸ್.ಯಡಿಯೂರಪ್ಪ :– ಮಾನ್ಯ ಉಪಾಧ್ಯಕ್ಷಣೆಯವರೇ, ಸದನದಲ್ಲಿ ಕೋರಂ ಇಲ್ಲ. ಈ ರೀತಿ ವಿಚಿತ್ರವಾದ ರೀತಿಯಲ್ಲಿ ಸಭೆಯ ಕಾರ್ಯಕಲಾಪ ನಡೆಸುವುದರಿಂದ ಜನರು ನಮ್ಮನ್ನು ಕ್ಷಮಿಸುವುದಿಲ್ಲ. ಕೋರಂ ಇಲ್ಲದೆ ಸಭೆಯನ್ನು ನಡೆಸುವುದು ಸರಿಯಲ್ಲ. ದಯಮಾಡಿ ಸಭೆಯನ್ನು ಸ್ವಲ್ಪ ಕಾಲ ಅಡ್ಜರ್ನ್ ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಕೇವಲ 22 ಜನ ಶಾಸಕರು ಮಾತ್ರ ಇಲ್ಲಿದ್ದಾರೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ :– ಮಾನ್ಯ ಉಪಾಧ್ಯಕ್ಷಣೆಯವರೇ, ಇಲ್ಲಿ ಬಹಳ ಮಹತ್ವವಾದ ವಿಚಾರ ಚರ್ಚೆಯಾಗುತ್ತದೆ. ದಯಮಾಡಿ ನಾನು ಮಾನ್ಯ ಯಡಿಯೂರಪ್ಪನವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಇದರ ಬಗ್ಗೆ ಪ್ರೆಸ್ ಮಾಡಬಾರದು.

ಶ್ರೀ ಬಿ.ಎಸ್. ಯಡಿಯೂರಪ್ಪ :– ಇದು ಸದನ ನಡೆಸುವಂಥ ರೀತಿಯಲ್ಲ. ಈಗ ಸದನವನ್ನು ಮುಂದೂಡುವುದು ಒಳ್ಳೆಯದು. ಈ ರೀತಿ ಸದನ ನಡೆಯುವುದಕ್ಕೆ ನಾನು ಅವಕಾಶ ಕೊಡುವುದಿಲ್ಲ. ದಯಮಾಡಿ ಸದನವನ್ನು ಮುಂದೂಡಬೇಕು.

2.00 ಪಿ.ಎಂ.

ಶ್ರೀ ಎನ್.ಜಿ. ನಾಯಕ್ :– ಇದು ಬಹಳ ಮಹತ್ವದ ವಿಷಯ ಇದೆ. ಇದರಿಂದ ಏನೂ ಹಾನಿಯಾಗುವುದಿಲ್ಲ.

ಶ್ರೀ ಗೋಪಿನಾಥ ಆರ್. ಸಾಂಡ್ರ :– ಕೋರಂ ಇಲ್ಲದಿದ್ದರೆ ಏನೂ ಅನಾಹುತವಾಗುವುದಿಲ್ಲ.

ಉಪಾಧ್ಯಕ್ಷಣಿಯವರು : ಈಗ ಸಭೆಯನ್ನು 10 ನಿಮಿಷಗಳ ಕಾಲ ಮುಂದೂಡೋಣವೇ?

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್ :– ಚರ್ಚೆ ನಡೆಯುತ್ತಿದೆ. ತಾವು ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಐದೇಮರು ಮತ್ತಷ್ಟು ದುಡ್ಡು ಮಾಡುತ್ತಾರೆ. ಅದರ ಮೇಲೆ ತಮಗೆ ಹೆಸರು ಕೂಡ ಕೆಡಿಸುತ್ತಾರೆ, ನಮ್ಮ ಹೆಸರು ಕೂಡ ಕೆಡುತ್ತದೆ ನೇರವಾಗಿ. ನಾವು ಯಾವುದಾದರೂ ಬ್ರೀಫ್ ಕೇಸ್ ತೆಗೆದುಕೊಂಡು ಕೊಡುತ್ತೇವೆ ಎನ್ನುವ ಅಭಿಪ್ರಾಯ ಕೂಡ ಜನಸಾಮಾನ್ಯರಲ್ಲಿ ಚರ್ಚೆ ಆಗತಕ್ಕೆ ಅಭಿಪ್ರಾಯವನ್ನು ನಾವು ನೋಡುತ್ತಿದ್ದೇವೆ. ದಯವಿಟ್ಟು ಈ ಒಂದು ಆಕ್ರೋಶಕ್ಕೆ ಅವಕಾಶ ಆಗಬಾರದು. ಎಲ್ಲರೂ ಕೂಡ ಬಹಳ ಜೋರಿನಿಂದ ಆಕ್ರೋಶ ಮಾಡತಕ್ಕ ಕಾರ್ಯಕ್ರಮವನ್ನು ಮಾಡಬಹುದು. ಇದನ್ನು ತಾವು ಸರಿಪಡಿಸಬೇಕೆಂದು ಅಧ್ಯಕ್ಷರ, ಮೂಲಕ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಗೋಪೀ ನಾಥ ಆರ್. ಸಾಂಡ್ರಾ :– ನನ್ನದೂ ಒಂದು ಕ್ಲಾರಿಫಿಕೇಶನ್ ಇದೆ.

ಉಪಾಧ್ಯಕ್ಷರು :– ಚರ್ಚೆಗೆ ನೀವು ಸಿಗ್ನೇಟರಿ ಅಲ್ಲ, ಆಮೇಲೆ ಕ್ಲಾರಿಫಿಕೇಶನ್ ಕೇಳಿ.

† ಶ್ರೀ ಟಿ.ಎನ್. ನರಸಿಂಹ ಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :– ಸದನದ ಇವೊತ್ತಿನ ಕಾರ್ಯಕ್ರಮಗಳ ಪಟ್ಟಿಯಲ್ಲಿ ಒಂದು ಬಹಳ ಪ್ರಮುಖವಾದ ವಿಷಯವನ್ನು ಸದನದ ನಿಯಮ 68ರ ಪ್ರಕಾರ ಪ್ರಸ್ತಾಪಿಸಲಾಗಿದೆ. ಸನ್ಮಾನ್ಯ ಸದಸ್ಯರಾದ ಶಿವರಾಮೇಗೌಡರು, ಮಾನ್ಯ ಆತ್ಮಾನಂದರವರು, ಮಲ್ಲಾರಿ ಗೌಡ ಪಾಟೀಲರು ಅವರುಗಳು ಅಧಿಕೃತವಾಗಿ ಒಂದು ಪ್ರಸ್ತಾಪವನ್ನು ಪ್ರಸ್ತಾಪ ಮಾಡಿದ್ದಾರೆ. ಬಹುಶ: ಮತ್ತಿತರ ಸದಸ್ಯರುಗಳಿಗೆ ಕೂಡ ಇದರಲ್ಲಿ ಆಸಕ್ತಿ ಇದೆ ಎಂಬುದು ನಿರ್ವಿವಾದ. ಮಾನ್ಯ ಸದಸ್ಯರಾದ ಶಿವರಾಮೇಗೌಡರು ತಮ್ಮ ವಾದವನ್ನು ಮಂಡಿಸುವಾಗ ಮತ್ತು ನಾವೆಲ್ಲರೂ ತಿಳಿದುಕೊಂಡಿರುವ ಹಾಗೆ ಪೆಟ್ರೋಲಿಯಂ ಪ್ರಾಡಕ್ಟ್ಸ್ ಏನು ಇದೆ, ಇವೆಲ್ಲಾ ಕೂಡ ಕೇಂದ್ರ ಸರ್ಕಾರ ವೇರವಾಗಿ ನಿಯಂತ್ರಿಸತಕ್ಕ ವಸ್ತುಗಳು. ರಾಜ್ಯ ಸರ್ಕಾರದ ಹೊಣೆಗಾರಿಕೆ ಅಥವಾ ಜವಾಬ್ದಾರಿ ಇಲ್ಲವೆಂದು ಹೇಳುವುದಿಲ್ಲ. ಇವೊತ್ತು ರಾಜ್ಯ ಸರ್ಕಾರದ ಹೊಣೆಗಾರಿಕೆ ಎಂದರೆ ಬಂದಂತಹ ವಸ್ತುಗಳನ್ನು ಇವೊತ್ತು ಸರಿಯಾಗಿ ವಿತರಣೆ ಆಗುತ್ತಿದೆಯೇ ಅಥವಾ ಇಲ್ಲವೇ ಎಂಬುದನ್ನು ನೋಡಲು ನೈತಿಕ ಮತ್ತು ಕಾನೂನು ಚೌಕಟ್ಟಿನಲ್ಲಿ ಅಧಿಕಾರ ಇದೆ. ನಾನು ಈ ಇಲಾಖೆಯನ್ನು ವಹಿಸಿಕೊಂಡ ನಂತರ, ನನಗೆ ಈ ಇಲಾಖೆಯ ಆಡಳಿತ ವ್ಯಾಪ್ತಿ ಬಂದ ಸಂದರ್ಭದಲ್ಲಿ ಮೊದಲು ಮಾಡಿದ ಕೆಲಸ ಎಂದರೆ ಇವೊತ್ತು ಡೀಸೆಲ್ ಮತ್ತು ಪೆಟ್ರೋಲ್ ವಿಚಾರಗಳಲ್ಲಿ ಏನೇನು ಪ್ರಸ್ತಾಪ ಮಾಡಿದ್ದಾರೆ ನಾನು ಪತ್ರವನ್ನು ಓದುವುದಕ್ಕೆ ಮುಂಚೆ ಒಂದು ವಿಚಾರ ಒಪ್ಪಿಕೊಳ್ಳುತ್ತೇನೆ. ಡೀಸೆಲ್ ಅಭಾವ ನಾನು ಬಂದಂತಹ ಕಾಲದಲ್ಲಿ ಇತ್ತು ಈಗಲೂ ಕೂಡ ಇದೆ ಎಂದು ಖಂಡಿತವಾಗಿ ಒಪ್ಪಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ವೆಂಕಟೇಶ್ :– ಜಾಸ್ತಿ ಇದೆ.....

ಶ್ರೀ ಟಿ.ಎನ್. ನರಸಿಂಹ ಮೂರ್ತಿ :– ತಾವು ಸೃಷ್ಟೀಕರಣ ನಂತರ ಕೇಳಿ. ಪೆಟ್ರೋಲ್ ಅಭಾವ ಇಲ್ಲ ಮತ್ತು ಸಾಕಾದಷ್ಟು ಸೀಮೆ ಎಣ್ಣೆ ಬರುತ್ತದೆ. ಆದರೂ ಕೂಡ ಅದು ಕಲಬೆರೆಕೆ ಎಲ್ಲೆಲ್ಲೋ ಹೋಗುತ್ತದೆ ಎನ್ನುವ ಸುದ್ದಿ ನನಗೆ ಬಂದಿದೆ. ಆದರೆ ಡೀಸೆಲ್ ಬಗ್ಗೆ ಮಾನ್ಯ ಶಿರಾಮೇಗೌಡರು, ಶ್ರೀಮಾನ್ ಮಲ್ಲಾರೀಗೌಡರು, ಶ್ರೀಮಾನ್ ಆತ್ಮಾನಂದ ಅವರುಗಳು ಇಟ್ಟಿರುವ ವಾದ ನಿಜಕ್ಕೂ ಕೂಡ ಕಳೆದ ಒಂದು ಒಂದೂವರೆ ತಿಂಗಳಲ್ಲಿ ಗಂಭೀರ ಪರಿಸ್ಥಿತಿ ಏನು ಇದೆ, ಅದರ ಹಿನ್ನೆಲೆಯಲ್ಲಿ ವ್ಯಕ್ತ ಮಾಡಿದ್ದಾರೆ. ಈ ಇಲಾಖೆಗೆ ನಾನು ಬಂದ ನಂತರ ದಿನಾಂಕ 24.11.1990ರಲ್ಲಿ ಒಂದು ಪತ್ರವನ್ನು ಬರೆದಿದ್ದೇನೆ. ಅದರ ಆದ್ಯತೆ ಮೇರೆಗೆ ಮತ್ತು ಜರೂರಾಗಿ ಬರೆದಿರತಕ್ಕ ಪತ್ರ. ಆವೊತ್ತು ಶ್ರೀಮಾನ್ ಚಂದ್ರಶೇಖರ್ ಅವರ ನಾಯಕತ್ವದಲ್ಲಿ ರಚನೆ ಆಗಿರತಕ್ಕ ಕೇಂದ್ರ ಮಂತ್ರಿ ಮಂಡಲದಲ್ಲಿ ಶ್ರೀಮಾನ್ ಮಾಳವೀಯ ಅವರು ಪೆಟ್ರೋಲಿಯಂಮಿನಿಸ್ಟರ್ ಆಗಿದ್ದಾರೆ. ಅವರಿಗೆ ಬರೆದ

ಮೊದಲನೇ ಪತ್ರದಲ್ಲಿ ತಾವುಗಳು ಏನು ಅಂಶಗಳನ್ನು ಪ್ರಸ್ತಾಪ ಮಾಡಿದ್ದೀರಿ, ಇವೆಲ್ಲಾ ಕೂಡ ಅದರಲ್ಲಿ ಪ್ರಸ್ತಾಪ ಮಾಡಿದ್ದೇನೆ. ನಾನು ಪತ್ರವನ್ನು ಓದಿದರೆ ತಮಗೆ ಮನವರಿಕೆ ಆಗುತ್ತದೆ. ಪತ್ರ ಕನ್ನಡದಲ್ಲಿ ಇಲ್ಲ. ಅದನ್ನು ಇಂಗ್ಲೀಷ್‌ನಲ್ಲಿ ಬರೆಯಬೇಕಾಗುತ್ತದೆ, ಕನ್ನಡದಲ್ಲಿ ನಾವು ಬರೆಯುವುದಕ್ಕೆ ಸಾಧ್ಯ ಇಲ್ಲ. ಪತ್ರ ಈ ರೀತಿ ಇದೆ.

I take this opportunity of congratulating you on your assuming charge as the Union Minister for Petroleum & Chemicals. With your rich and vast experience, I am confident your contribution will have positive impact in the effective administration of a vital Department.

You are no doubt aware the critical supplies of Diesel and Kerosene Oil to State, particularly my State, is experiencing extreme shortage of Diesel resulting in great inconvenience to the public. I am afraid if prompt remedial measures are not taken, the situation may become very critical. Hence, I have taken the liberty to draw your kind attention immediately on your assuming the charge.

Subsequent to the D.O.letter No.P-2101/15/90/DISI/168-5 dated 22-6-90 of the then Hon'ble Minister for Petroleum & Chemicals, Government of India addressed to the Chief Minister, Government of Karnataka, several steps to cut down the consumption of Petroleum products, such as petrol, HSD and Kerosene have been initiated and this has been communicated to Government of India. We appreciate the critical situation the country is passing through especially due to increase in international prices of petroleum products as well as the contrains on foreign exchange. Nevertheless, I consider it important to draw the kind attention of the Government of India for immediate increase in the quotas assigned to Karnataka State with respect of diesel and Kerosene Oil.

A high Level Meeting was recently held to review the allocation and distribution of HSD & Kerosene Oil and wherein senior officials of the Oil Companies were also present.

It was noted from the figures submitted that a shortfall of 20% to 25% exists in supply of HSD in the State. As a result, all the Bunks in the State are saddled by long queues for supply of Diesel. As you are aware that a major portion of our agricultural operation is dependent upon borewell and well-irrigation. A large number of small and marginal farmers have therefore put up diesel pumpsets for irrigation. Even this would not have been a major issue, but for the total failure of rains in many parts of the State which has compelled farmers to the maximum use of diesel pump sets. To add to it, there are 26 sugar factories in the State for which complete requirement of HSD is to be met on priority to transport the cane. The State also has serious power problem, having already imposed heavy power cuts at all sectors. Therefore, the demand for diesel has steeply gone up whereas the allocation is reduced by over 20000 MTs. Similar also is the case with the kerosene oil. May I, therefore, earnestly request you to increase the allocation of HSD and Kerosene Oil to the State with immediate effect. you immediate intervention at this stage will help the State to overcome a serious situation.

An early positive action in this regard will be highly appreciated.

ಈ ಪತ್ರವನ್ನು ಟೆಲೆಕ್ಸ್ ಮುಖಾಂತರ ಕಳುಹಿಸಿಕೊಟ್ಟಿದ್ದೇವೆ. ಈ ಪತ್ರದ ಬೆಳವಣಿಗೆಯ ನಂತರ ಆಗಿರತಕ್ಕಂಥ ಒಂದು ಕಾರ್ಯವನ್ನು ಮತ್ತು ಸಂತೋಷದ ಸುದ್ದಿಯನ್ನು ತಮಗೆ ಹೇಳ ಬೇಕಾಗುತ್ತದೆ. ಅದೇನೆಂದರೆ, ಶೇಕಡಾ 10ರಷ್ಟು ಕಡಿತವನ್ನು ಕೇಂದ್ರ ಸರಕಾರದವರು ಕೈಬಿಟ್ಟಿದ್ದಾರೆ. ಅದರ ಪರಿಣಾಮವಾಗಿ ಗಣನೀಯವಾಗಿ ಪರಿಸ್ಥಿತಿಯು ಸುಧಾರಣೆಯಾಗಿದೆ. ಅಭಾವಪರಿಸ್ಥಿತಿಯ ಸುಧಾರಣೆ ಪೂರ್ಣ ಪ್ರಮಾಣದಲ್ಲಿ ಆಗದಿದ್ದರೂ ಕೂಡ ಸ್ವಲ್ಪ ಪ್ರಮಾಣದಲ್ಲಾದರೂ ಆಗಿದೆ. ಆದರೆ ಅದರ ವಿತರಣಾ ವ್ಯವಸ್ಥೆಯಲ್ಲಿ ಇನ್ನೂ ಸಾಕಷ್ಟು